EXPENDITURE TOWARDS THE SALARIES OF TEACHERS OF PRIVATE HIGH SCHOOLS.

*Q.—427. Sri N. NANJE GOWDA (Krishnarajapet).—

Will the Government be pleased to state :—

(*a*) whether the entire expenditure incurred towards the salaries of teachers of private High Schools in the State would be met by Government from the first year of the 4th Plan period ;

(*b*) If so, the policy they would adopt in respect of some High Schools which were started subject to the condition that they would not be given grants for three years ?

A.—Sri S. R. KANTHI (Minister for Education).—

(*a*) The whole matter will be examined.

(*b*) The condition will hold good as matters stand now.

ಶ್ರೀ ಎನ್. ನಂಜೇಗೌಡ.—ಹೋದಸಾರಿ ಈ ಪ್ರೌಢಶಾಲೆಗಳಿಗೆ ಆಲ್ಲ ಟೀಚಿಂಗ್ ಅಷ್ಟೊಂದು ಸರಿಯಲ್ಲ ಎಂದು ಗ್ರಾಂಟ್ ಕೊಡುವುದಿಲ್ಲ ಎಂದು ಮಾಡಿರ ವುದು ಸರಿಯೇ ?

†ಶ್ರೀ ಎಸ್. ಆರ್. ಕಂಠಿ.—ಹಾಗೆ ನಾನು ಹೇಳಿಲ್ಲ. ಆದರೆ ಇದು ವಿಚಾರಣೆ ನಡೆಯುತ್ತಾ ಇದೆ.

ಶ್ರೀ ಎನ್. ನಂಜೇಗೌಡ.—ತಾವು ಮೂರು ವರ್ಷ ಪ್ರೈವೇಟ್ ಹೈಸ್ಕೂಲುಗಳಿಗೆ ಗ್ರಾಂಟ್ ಕೊಡುವುದಿಲ್ಲ ಎಂದು ಹೇಳಿದ್ದೀರಿ. ಈಗ ಈ ಸ್ಕೂಲುಗಳು 5 ಸಾವಿರ ರೂಪಾಯಿ ಮಾತ್ರ ಡಿಪಾಜಿಟ್ ಮಾಡುತ್ತಾರೆ. ಸರ್ಕಾರದ ಸಹಾಯವಿಲ್ಲದೆ ವಿದ್ಯಾಭ್ಯಾಸ ಕೆಡುತ್ತಿದೆ ; ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಅವರು ಒಪ್ಪಿಕೊಂಡ ಪ್ರಕಾರ ಈಗ ಏನೂ ಮಾಡುವುದಕ್ಕಾಗುವುದಿಲ್ಲ. ಅವರು ಮೂರು ವರ್ಷದವರೆಗೆ ಗ್ರಾಂಟ್ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ.

ಶ್ರೀ ಎನ್. ನಂಜೇಗೌಡ.—ಈಗಿನ ರೀತಿಯಲ್ಲಿ ಒಪ್ಪಿಗೆ ಕೊಡುವುದರಿಂದ ವಿದ್ಯಾಭ್ಯಾಸ ಮಟ್ಟ ಕೆಡುತ್ತದೆ. ಅದಕ್ಕೆ ತಾವು ಮುಂದಾದರೂ ಇಂಥ ಸ್ಕೂಲ್‌ಗಳಿಗೆ ಒಪ್ಪಿ ಕೊಡಬೇಕಾದರೆ ಯಾರಿಗೆ ಮೂರು ವರ್ಷ ಮೈಂಟೈನ್ ಮಾಡುವಷ್ಟು ಶಕ್ತಿ ಇದೆಯೋ, ಅಂಥ ಶಾಲೆಗಳಿಗೆ ಮಾತ್ರ ಪರ್ಮಿಶನ್ ಕೊಡಬೇಕು. ಸುಮಾರು ನಾಲ್ಕೈದು ಸಾವಿರ ಭಂಡವಾಳವಿರುವವರಿಗೆ ನೀವು ಪರ್ಮಿಶನ್ ಕೊಡುವುದರಿಂದ ವಿದ್ಯಾಭ್ಯಾಸದ ಮಟ್ಟವು ಕೆಡುತ್ತದೆ. ತಾವು ಇನ್ನು ಮುಂದಾದರೂ ಹಾಗೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಅದು ಸಾಧ್ಯವಿಲ್ಲ. ಯಾರಿಗೆ ಸಾಧ್ಯವಿಲ್ಲವೋ ಅವರು ಕ್ಲೋಸ್ ಮಾಡುತ್ತಾರೆ.

AMOUNT SPENT ON IRRIGATION PROJECTS IN GAURIBIDANUR TALUK.

*Q.—98. Sri R. N. LAKSHMIPATHI (Gauribidanur).—

Will the Government be pleased to state :—

(*a*) what is the total amount spent by the Public Works Department on irrigation projects in Gauribidanur Taluk for the last 3 years ;

(*b*) how many acres of land are brought under irrigation thereby ?

A.—SRI ALUR HANUMANTHAPPA (Deputy Minister for Minor Irrigation) .—

(*a*) Rs. 13,49,942.
(*b*) 2,034 acres.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈಗ ಉತ್ತರದಲ್ಲಿ 13 ಲಕ್ಷ ಚಿಲ್ಲರೆ ಖರ್ಚು ಮಾಡಿದ್ದೀರಿ ಎಂದು ಇದೆ. ಇದರಲ್ಲಿ ಯಾವ ಕೆರೆಗಳು ಮುಗಿದಿವೆ ? ಎಷ್ಟೆಷ್ಟು ಕೆಲಸಗಳು ಆಗಿವೆ ? ಯಾವುವು ಅಚ್ಚುಕಟ್ಟಿಗೆ ಬಂದಿವೆ ಎಂಬುದರ ವಿವರ ಕೊಡುತ್ತೀರಾ ?

†ಶ್ರೀ ಆಲೂರು ಹನುಮಂತಪ್ಪ.—62-63 ನೇ ಸಾಲಿನ ಕೆಲಸ ತೆಗೆದುಕೊಂಡದ್ದು ಮತ್ತು ಮುಗಿಸಿರತಕ್ಕದ್ದು ಒಂದು ಪಟ್ಟಿ ಇಲ್ಲಿ ಇದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ತಾವು ಎರಡು ಸಾವಿರ 34 ಎಕರೆ ಎಂದು ಹೇಳಿದ್ದೀರಿ. ಇತ್ತೀಚೆಗೆ ಕೇವಲ 150 ಎಕರೆಯಾಗಿರುವುದು ಒಪ್ಪಿಕೊಳ್ಳುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ತೆಗೆದುಕೊಂಡಿರತಕ್ಕ ಹಣವನ್ನು ಸರಿಯಾಗಿ ಖರ್ಚು ಮಾಡುವುದು ಮುಖ್ಯ. 62-63, 63-64, 64-65ನೇ ಸಾಲಿನಲ್ಲಿ ಒಟ್ಟು 13 ಲಕ್ಷದ 49 ಸಾವಿರ 942 ರೂಪಾಯಿ ಖರ್ಚು ಮಾಡಿದ್ದೇವೆ. ಇದರಿಂದ 2,403 ಎಕರೆ ನೀರಾವರಿಯಾಗಿದೆ. ಅದನ್ನು ಉತ್ತರದಲ್ಲಿ ಕೊಟ್ಟಿದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈಗ 62-63 ರಿಂದ ತಾವು ತೆಗೆದುಕೊಂಡ ಪ್ರತಿಯೊಂದು ಕೆಲಸ ಕೂಡ ಕುಂಠಿತವಾಗಿ, ಕೇವಲ 150ನ್ನು ಬಿಟ್ಟರೆ, ಬೇರೆ ಯಾವುದೂ ಅಚ್ಚುಕಟ್ಟಿಗೆ ಬಂದಿಲ್ಲ ಎನ್ನುವುದನ್ನು ತಾವು ಒಪ್ಪಿಕೊಳ್ಳುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಅದು ಸರಿಯಾದ ಅಭಿಪ್ರಾಯವಲ್ಲ.

ಶ್ರೀ ಜಿ. ರಾಮೇಗೌಡ.—ಸ್ಪಿಲ್‌ಓವರ್ ಕೆಲಸದ ನೆಪ ಇಟ್ಟುಕೊಂಡು ಕೆಲಸ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಆ ಅಂಶವನ್ನು ಪರಿಗಣಿಸದೆ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಸ್ಪಿಲ್‌ಓವರ್ ನೆಪದಿಂದ ಕೆಲಸವೇನೂ ಕುಂಠಿತವಾಗಿಲ್ಲ. ಈಗ ಹಲವಾರು ಕಡೆ ಆ ಕೆಲಸಗಳನ್ನು ಮಾಡಿದ್ದೇವೆ. 23 ಕೋಟಿಯ ಸ್ಪಿಲ್ ಓವರ್ ಕೆಲಸ ಇದೆ. ಈ ವರ್ಷದಲ್ಲಿ 10 ಕೋಟಿಯಷ್ಟು ತೆಗೆದುಕೊಂಡಿದ್ದೇವೆ. ಇದರ ಜೊತೆಗೆ 4 ಕೋಟಿ 50 ಸಾವಿರದ ಹೊಸ ಕೆಲಸ ಕೂಡ ತೆಗೆದುಕೊಂಡಿದ್ದೇವೆ. ಇದನ್ನು ಜೂನ್ 67ರ ಒಳಗೆ ಮುಗಿಸತಕ್ಕ ಫೇಸ್‌ಡ್ ಪ್ರೋಗ್ರಾಮ್ ಹಾಕಿಕೊಂಡಿದ್ದೇವೆ.

FLOOD DAMAGE WORKS

**Q.*—246. SRI H. R. KESHAVA MURTHY (Gandasi) .—

Will the Government be pleased to state :—

(*a*) the number of flood damage works reported by the Assistant Engineers of Arsikere, Channarayapatna and Hassan Taluks during the last three years ;

(*b*) the number and the names of works taken up for execution together with their estimated cost ;

(*c*) the number of works for which estimates have been prepared, but not taken up ;

(*d*) the number of works for which estimates have not been prepared ;

(*e*) the grant received from the Centre to tackle the flood damages in the above taluks ;

(*f*) the time required to take up all the works of the above-mentioned taluks ?